# ಹರಿ ದರುಶನಕಾಗಿ ನಾರದರು ಬರಲು

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 449.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 586.
3. **Note:** This song is not available in Shri Betageri Krishna Sharma and Shri Bengeri Huchha Rayaru books.
4. **Note:** Lyrics mentioned here are as per Ref. 1. The wordings in Ref. 2 are slightly different and are given in yellow highlights.
5. **Note:** Singer has followed lyrics as in Ref. 1.

ರಾಗ: ಸಾವೇರಿ ತಾಳ: ತ್ರಿಪುಟ

| | |
|---|---|
| ಹರಿ ದರುಶನಕಾಗಿ ನಾರದರು ಬರಲು | ಹರಿ ದರುಶನಕಾಗಿ ನಾರದರು ಬರಲು |
| ಸಿರಿದೇವಿ ಹೊರಗಿನ ಬಾಗಿಲಲ್ಲಿರಲು ॥ ಪ ॥ | ಸಿರಿದೇವಿ ಹೊರಗಿನ ಬಾಗಿಲಲ್ಲಿದ್ದಳು |
| | |
| ಕರಕಮಲ ಮುಗಿದು ದೊರೆ ಸಮಯವೇನೆನಲು | ಕರಕಮಲ ಮುಗಿದು ದೊರೆ ಸಮಯವೇನೆನಲು |
| ನಾರೀಮಣಿ ಲಕುಮಿಯು ಅರುಹುವಳಾಗ ॥ ಅಪ ॥ | ನಾರೀಮಣಿ ಲಕುಮಿ ಅರುಹುವಳಾಗ |
| | |
| ವರ ದೇವತಾರ್ಚನೆ ಅರಮನೆಯೊಳಗೆ | ವರ ದೇವತಾರ್ಚನೆ ಅರಮನೆಯೊಳಗೆ |
| ಭರದಿಂದ ಕುಳಿತಿಹನು ಪರಮಾತ್ಮನು | ಭರದಿಂದ ಕುಳಿತಿಪ್ಪ ಪರಮಾತ್ಮನು |
| ಸರಸಿಜೋದ್ಭವ ಮುಖ್ಯ ಸುರರಿಗೆ ದೊರೆಯೀತ | ಸರಸಿಜೋದ್ಭವನಾದಿ ಸುರರಿಗೆ ದೊರೆಯೀತ |
| ಪರಮ ಆಶ್ಚರ್ಯವ ಅರಿಯಬೇಕೆಂದ ॥ ೧ ॥ | ಪರಮ ಆಶ್ಚರ್ಯವ ಅರಿಯಬೇಕೆಂದು |
| | |
| ಕಳವಳಿಸುತ ಮನೆಯೊಳಗೆ ದೂರುತೆ ಕಂಡ | ಕಳವಳಿಸುತ ಮನದೊಳಗೆ ತೋರುತಲಿರೆ |
| ಥಳಥಳಿಸುವ ರನ್ನ ಸಂಪುಟದಿ | ಥಳಥಳಿಸುವ ರತ್ನ ಸಂಪುಟದಿ |
| ಕಲುಷದೂರರಾದ ಪ್ರಹ್ಲಾದ ನಾರದ | ಕಲುಷದೂರನನ್ನು ಪ್ರಹ್ಲಾದ ವರ ಧ್ರುವನು |
| ವರ ಅಂಬರೀಷ ಮುಖ್ಯರ ಪೂಜೆಗೆಯ್ವುದನು ॥ ೨ ॥ | ಬಲಿ ಅಂಬರೀಷ ಮುಖ್ಯರು ಪೂಜೆಗೆಯ್ವ |
| | |
| ಹರಿದಾಸರ ಚರಣ ರಜಗಳ ತುಂಬಿಟ್ಟು | ಹರಿದಾಸರ ಚರಣ ರಜಗಳ ತುಂಬಿಟ್ಟು |
| ತೆರೆದು ತೋರಿದ ಮುನಿಗೆ ಪರಮಾತ್ಮನು | ತೆಗೆದು ತೋರಿದ ಮುನಿಗೆ ಪರಮಾತ್ಮನು |
| ಪರಮಾನಂದ ಭರಿತನಾಗಿ ನಾರದ ಮುನಿ | ಪರಮಾನಂದ ಭರಿತನಾದ ವಿರಿಂಚಿಸುತ |
| ಸಿರಿಪತಿ ಪುರಂದರ ವಿಠಲನನು ಸ್ತುತಿಸುತ ॥ ೩ ॥ | ಸಿರಿಪತಿ ಪುರಂದರ ವಿಠಲನ್ನ ಸ್ತುತಿಸುತ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಪರಮಾತ್ಮನು ಭಕ್ತರ ಅಧೀನನೆಂದೂ, ತನ್ನ ತೊಂಡರಿಗೆ ತಾನೇ ತೊಂಡನೆಂದೂ ಭಾಗವತರಲ್ಲಿ ಪ್ರಸಿದ್ಧಿ. 'ಹೂವ ತರುವರ ಮನೆಗೆ ಹುಲ್ಲ ತರುವ' ಎಂಬ ಭಾವ ಅವರ ಪರಮ ವಿಶ್ವಾಸಕ್ಕೆ ಕಾರಣ. ಇದನ್ನು ಒಂದು ಪ್ರಸಂಗದಂತೆ ಕಲ್ಪಿಸಿಕೊಂಡು, ವೈಕುಂಠದಲ್ಲಿ ಪರಮಾತ್ಮನು ಭಕ್ತರ ಪೂಜೆಯಲ್ಲಿ ತೊಡಗಿರುವಂತೆ ಈ ಪದದಲ್ಲಿ ಕಾಣಿಸಿದ್ದಾರೆ.

**ಅರಮನೆಯೊಳಗೆ** – ವೈಕುಂಠದಲ್ಲಿ.

**ಭರದಿಂದ** – ಸಂಭ್ರಮದಿಂದ.

**ವಿರಿಂಚಿ** = ಬ್ರಹ್ಮ,

**ಚರಣ ರಜ** = ಪಾದದ ಧೂಳು, ಪಾದ ಧೂಳಿ

**ಕಲುಷ** = ಕಳಂಕ, ಹೊಲಸು,

**ಪ್ರಹ್ಲಾದ** – ಹಿರಣ್ಯಕಶಿಪುವೆಂಬ ದಾನವ ಮತ್ತು ಅವನ ಹೆಂಡತಿ ಕಯಧು ಇವರ ಮಗ, ವಿಷ್ಣುಭಕ್ತ. ನರಸಿಂಹಾವತಾರಕ್ಕೆ ಕಾರಣನಾದ. ಇವನ ಕಥೆ ಭಾಗವತ, ವಿಷ್ಣು ಪುರಾಣ ಮತ್ತು ಮತ್ಸ್ಯ ಪುರಾಣ ಗಳಲ್ಲಿ ಬರುತ್ತದೆ.

**ನಾರದ** – ಸ್ವಾಯಂಭುವ ಮನ್ವಂತರದಲ್ಲಿ ಬ್ರಹ್ಮನ ಮಾನಸಪುತ್ರ; ದೇವರ್ಷಿಯೆಂದು ಪ್ರಸಿದ್ಧನಾದವನು. ವಿಷ್ಣುಭಕ್ತ; ಸಂಕೀರ್ತನ ಪದ್ಧತಿಯ ಪ್ರವರ್ತಕ. ನಾರಾಯಣನು ಇವನಿಗೆ ಶ್ವೇತದ್ವೀಪದಲ್ಲಿ ಭಾಗವತ ಧರ್ಮವನ್ನು ಬೋಧಿಸಿದನು.

**ಅಂಬರೀಷ** – ಸೂರ್ಯ ವಂಶದಲ್ಲಿ ಬಂದ ರಾಜ; ವೈವಸ್ವತಮನುವಿನ ಮೊಮ್ಮಗ, ನಾಭಾಗನ ಮಗ, ವಿಷ್ಣುಭಕ್ತ. ಏಕಾದಶೀ ವ್ರತ ಪಾಲನೆಯಲ್ಲಿ ನಿಷ್ಠ; ಇವನ ವ್ರತವನ್ನು ಮುರಿಯಲೆಂದು ಬಂದ ದುರ್ವಾಸನು ವಿಷ್ಣು ಚಕ್ರದಿಂದ ಬವಣೆ ಪಟ್ಟ ಕಥೆ ಭಾಗವತದಲ್ಲಿದೆ.

**Classification:** Keerthane
**Ankita:** purandara vittala
**Location:** NA
**Category:** Bhakti,
**Sub-Category:** Krishna, narada, Lakshmi, bagilu, kai, archane, vaikunta, paramatma, Vishnu, sura, mane, mana, ratna, prahallada, Dhruva, brahma, muni, ambarisha, puje,
**Pravachana:** NA
**Explanation:** NA